‘ಕಾಡಿನಲ್ಲಿ ದಾರಿ ತಪ್ಪಿ ಸಿಕ್ಕಿ ಹಾಕಿಕೊಂಡಿದ್ದೀರ. ನನಗೆ ವಿಪರೀತ ಹಸಿವಾಗಿದೆ. ನಿಮ್ಮಿಬ್ಬರನ್ನೂ ತಿಂದು ಬಿಡಲೇ ಎಂದು ಯೋಚಿಸುತ್ತಿದ್ದೇನೆ’ ಎಂದಿತು ದೆವ್ವ. ಮತ್ತೆ ಹುಡುಗರಿಬ್ಬರೂ ಹೆದರಿ ಜೋರಾಗಿ ಅಳತೊಡಗಿದರು. ಕಿಟ್ಟು ಸ್ವಲ್ಪ ಧೈರ್ಯ ತಂದುಕೊಂಡು ‘ಅಪ್ಪಾ, ದೆವ್ವವೇ, ನಮ್ಮನ್ನು ತಿನ್ನಬೇಡ. ದಯವಿಟ್ಟು ಬಿಟ್ಟುಬಿಡು. ನಮ್ಮ ಜೊತೆ ನಮ್ಮ ಮನೆಗೆ ಬಾ. ಅಮ್ಮನಿಗೆ ಹೇಳಿ ನಿನ್ನ ಹೊಟ್ಟೆ ತುಂಬಾ ಊಟ ಹಾಕಿಸುತ್ತೇನೆ’. ಎಂದ. ದೆವ್ವ ಗಟ್ಟಿಯಾಗಿ ನಗುತ್ತಾ ‘ನಾನು ದೆವ್ವ. ಮನುಷ್ಯರು ತಿನ್ನುವ ಊಟ, ತಿಂಡಿ ತಿನ್ನುವುದಿಲ್ಲ. ನಾನು ತಿನ್ನುವುದೇ ಮನುಷ್ಯರನ್ನು. ಆದರೆ ನೀವಿನ್ನೂ ಚಿಕ್ಕ ಹುಡುಗರು. ನಿಮ್ಮನ್ನು ಬಿಟ್ಟು ಬಿಡುತ್ತೇನೆ. ಆದರೆ ಒಂದು ಷರತ್ತಿನ ಮೇಲೆ’ ಎಂದಿತು.

ಹುಡುಗರಿಬ್ಬರಿಗೂ ಸ್ವಲ್ಪ ಧೈರ್ಯ ಬಂತು. ‘ನಿಮ್ಮ ಷರತ್ತೇನು?’ ಎಂದರು. ಆಗ ಆ ದೆವ್ವ ‘ಹಿರಿಯರ, ಅಂದರೆ ನಿಮ್ಮ ತಂದೆ, ತಾಯಿ, ಗುರುಗಳು ಮೊದಲಾದವರ ಮಾತುಗಳನ್ನು, ಬುದ್ಧಿವಾದಗಳನ್ನು ಕೇಳಬೇಕು. ಹಿರಿಯರ ಅನುಮತಿಯಿಲ್ಲದೇ ಯಾವ ಕೆಲಸವನ್ನೂ ಮಾಡಬಾರದು. ಕಲಿಕೆಯಲ್ಲಿ ಆಸಕ್ತಿಯಿರಬೇಕು. ಓದಿ ವಿದ್ಯಾವಂತರಾಗಬೇಕು’ ಎಂದಿತು. ಕಿಟ್ಟು, ಪುಟ್ಟು ಇಬ್ಬರೂ ‘ನಿಮ್ಮ ಮಾತುಗಳನ್ನು ತಪ್ಪದೇ ಪಾಲಿಸುತ್ತೇವೆ. ದಯಮಾಡಿ ನಾವು ನಮ್ಮ ಮನೆಗೆ ಹೋಗಲು ಸಹಾಯ ಮಾಡಿ’ ಎಂದರು.

ಆಗ ಮರದ ಮೇಲಿಂದ ಆಕೃತಿಯೊಂದು ಕೆಳಗಿಳಿಯಿತು. ಇಡೀ ದೇಹ ಬಿಳಿ ಬಟ್ಟೆಯಿಂದ ಮುಚ್ಚಿತ್ತು. ಕಣ್ಣುಗಳ ಜಾಗದಲ್ಲಿ ಮಾತ್ರ ಎರಡು ರಂಧ್ರಗಳಿದ್ದವು. ನೋಡಿದರೆ ಭಯವಾಗುತ್ತಿತ್ತು. ‘ನನ್ನ ಹಿಂದೆ ಹಿಂದೆ ಬನ್ನಿ’ ಎಂದು ಆ ದೆವ್ವ ಅವರನ್ನು ಕರೆದುಕೊಂಡು ಹೋಗಿ ಅವರ ಮನೆಯ ಹತ್ತಿರ ಬಿಟ್ಟು ‘ನನ್ನ ಮಾತು ನೆನಪಿರಲಿ. ನಾನು ನಿಮ್ಮನ್ನು ಗಮನಿಸುತ್ತಿರುತ್ತೇನೆ. ಮತ್ತೆ ಹಳೆ ಚಾಳಿ ಮುಂದುವರೆಸಿದರೆ ನಿಮ್ಮನ್ನು ಬಿಡುವುದಿಲ್ಲ’ ಎಂದು ಹೇಳಿ ಅಲ್ಲಿಂದ ಹೊರಟು ಹೋಯಿತು.

ಅಪ್ಪ, ಅಮ್ಮಂದಿರಿಗೆ ಅವರನ್ನು ನೋಡಿ ಹೋದ ಜೀವ ಬಂದಂತಾಯಿತು. ಆದರೂ ಮತ್ತೊಮ್ಮೆ ಅವರಿಗೆ ಬುದ್ಧಿವಾದದ ಪಾಠವಾಯಿತು. ಇನ್ನೆಂದೂ ಇಂತಹ ಕೆಲಸ ಮಾಡುವುದಿಲ್ಲವೆಂದೂ, ಅಪ್ಪ, ಅಮ್ಮ ಹೇಳಿದಂತೆ ನಡೆಯುವುದಾಗಿಯೂ ಹೇಳಿ ಊಟ ಮಾಡಿ ಮಲಗಿದರು. ಮಾರನೇ ದಿನ ಕಿಟ್ಟು ಮತ್ತು ಪುಟ್ಟುವಿನ ತಂದೆಯರಿಬ್ಬರೂ ಭೀಮಣ್ಣ ಎಂಬ ಅವರ ಸ್ನೇಹಿತರನ್ನು ಭೇಟಿಯಾಗಿ ಮಕ್ಕಳಿಗೆ ಬುದ್ಧಿ ಕಲಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಿದರು. ■

# ವಿದ್ಯೆ ಕಲಿತು ಜಾಣರಾಗಿ

■ **ಜೀನಹಳ್ಳಿ ಸಿದ್ಧಲಿಂಗಪ್ಪ**

ಕಲೆ: ಸಂತೋಷ್ ಸಸಿಹಿತ್ಲು



ಕೋಗಿಲೆ ತಾ ಮರದ ಮೇಲೆ
ಏಕೆ ಕುಳಿತಿದೆ?
ಕುಹೂ ಕುಹೂ ಹಾಡಿಕೊಳಲು
ದನಿಯ ತೆಗೆದಿದೆ

ಬೆಟ್ಟದಲ್ಲಿ ನವಿಲು ಏಕೆ
ಆಡಿ ಕುಣಿದಿದೆ?
ಗಿರಿಯನೇರಿ ಬರುವ ಜನಕೆ
ನೃತ್ಯ ತೋರಿದೆ

ಕೋತಿಯೇಕೆ ಮರವನೇರಿ
ಹಲ್ಲು ಕಿಸಿದಿದೆ?
ಹಣ್ಣು ಕಿತ್ತು ಎಸೆದು ಬಿಟ್ಟು
ಆಟವಾಡಿದೆ

ಜಿಂಕೆಯೇಕೆ ಓಡಿ ನೋಡಿ
ಹಾರಿ ಕುಣಿದಿದೆ?
ಮನಸು ಬಿಚ್ಚಿ ಆಡಲಿಕ್ಕೆ
ದಾರಿ ತೋರಿದೆ

ಗಾಳಿಪಟವು ಮುಗಿಲಿನೊಳಗೆ
ಹೇಗೆ ಹಾರಿದೆ?
ಸೂತ್ರ ಹಿಡಿದು ಬಿಡಲು ಓಡಿ
ಕೈಯ ಜಗ್ಗಿದೆ

ಮಕ್ಕಳೇಕೆ ಶಾಲೆಯಲ್ಲಿ
ಕಲಿಯಬೇಕಿದೆ?
ವಿದ್ಯೆ ಕಲಿತುಕೊಂಡು
ಜಾಣರೆನಿಸಬೇಕಿದೆ ■



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ:** editorsu@sudha.co.in

## ಕುಂಚ ಪ್ರಪಂಚ



**ಗೌತಮಿ ಆರ್**
9ನೇ ತರಗತಿ, ಇಂಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್, ಚಿತ್ರದುರ್ಗ